ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸಭಾನಾಯಕರು ಮತ್ತು ಉಪಮುಖ್ಯಮಂತ್ರಿಗಳು ಒಂದೇ ಧಾಟಿಯಲ್ಲಿ ಮಾತನಾಡತಕ್ಕಂಥವರು. ಎರಡು ಕಿವಿಗಳು ಒಂದೇ, ಹೃದಯ ಒಂದೇ, ಅಂದರೆ ಅವರಿಬ್ಬರೂ ಬಹಳ ಪ್ರೀತಿ ವಿಶ್ವಾಸದಿಂದ ಇರತಕ್ಕಂಥವರು ಈ ವಿಷಯವನ್ನು ಮಾತ್ರ ನಿಮ್ಮ ಮೇಲೆ ಹಾಕಿದ್ದನ್ನು ನೋಡಿದರೆ ನಮಗೆ ಅನುಮಾನ ಬರುತ್ತಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಮಾತ್ರ ಭರವಸೆಯನ್ನು ಕೊಡದೆ ಇನ್ನಾರೋ ಮೇಲೆ ಹಾಕತಕ್ಕಂಥದ್ದು ಸರಿಯಲ್ಲ. ಪ್ರತಿಯೊಂದಕ್ಕೂ ಉತ್ತರವನ್ನು ಕೊಟ್ಟುಕೊಂಡು, ಪ್ರತಿಯೊಂದನ್ನು ಒಪ್ಪಿಕೊಂಡು ಇದಕ್ಕೆ ಮಾತ್ರ ಏಕೆ ನೀವು ಹೀಗೆ ಮಾಡುತ್ತೀರಿ?.

ಶ್ರೀ ಜೆ.ಹೆಚ್. ಪಟೇಲ್ : ಬೀಗತನ ಮಾಡಬೇಕೆಂದು ಇಚ್ಛೆ ಇದ್ದರೂ ಯಜಮಾನರು ಬರಲಿ ಎಂದು ಹೇಳುವುದಿಲ್ಲವೇ?

ಅಧ್ಯಕ್ಷರು : ನಂತರ ಉಪಮುಖ್ಯಮಂತ್ರಿಗಳಾದ ತಮ್ಮದೇ ಒಂದು ಬೇಡಿಕೆ ಇದೆ. ಅದೇನೆಂದರೆ ಲೆಜಿಸ್ಲೇಟರ್‌ಗಳಿಗೆ ಒಂದು ಕ್ಲಬ್ ಇರಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ನೀವು 2 ಸಾರಿ ಹೇಳಿದಿರಿ. ಆ ಪ್ರಸ್ತಾವ ಕೂಡ ಹಾಗೆಯೇ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸಧ್ಯಕ್ಕೆ ಮಾನ್ಯ ಪಟೇಲರೇ ಯಜಮಾನರೆಂದು ನಾವು ತಿಳಿದುಕೊಂಡಿರುವುದು.

ಅಧ್ಯಕ್ಷರು : ಸಭಾನಾಯಕರು ಬಂದಮೇಲೆ ಉಪಮುಖ್ಯಮಂತ್ರಿಗಳಾದ ನೀವು, ವಿರೋಧ ಪಕ್ಷದ ನಾಯಕರನ್ನು ಮತ್ತು ಎಲ್ಲಾ ಮುಖಂಡರುಗಳನ್ನು ಕರೆದು ಈ ವಿಷಯದ ಬಗ್ಗೆ ಇವತ್ತು ಅಥವಾ ನಾಳೆ 10 ನಿಮಿಷ ಕುಳಿತು We can take a decision about both these matters.

ಈ ಅಧಿವೇಶನ ಮುಗಿಯುವುದರೊಳಗಾಗಿ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆ

(1) ಗದಗ ಎ.ಪಿ.ಎಂ.ಸಿ.ಯ ನೂತನ ಪ್ರಾಂಗಣಕ್ಕೆ ಹೆಚ್ಚಿನ ಸ್ಟ್ಯಾಂಪ್ ಡ್ಯೂಟಿ ವಸೂಲಿ ಮಾಡದೆ ನೊಂದಣಿ.

+ಶ್ರೀ ಡಿ.ಆರ್. ಪಾಟೀಲ್ (ಗದಗ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ಗದಗ ಎ.ಪಿ.ಎಂ.ಸಿ.ಯು ತನ್ನ ನೂತನ ಪ್ರಾಂಗಣಕ್ಕೆ ವ್ಯವಹಾರವನ್ನು ಸ್ಥಳಾಂತರಿಸುವ ಸಲುವಾಗಿ ನೂರು ಎಕರೆ ಜಮೀನನ್ನು ಖರೀದಿಸಿ ಅದರಲ್ಲಿ ನಿವೇಶನ ರಚಿಸಿ ಸ್ವಲ್ಪ ಲಾಭಾಂಶ ಇಟ್ಟುಕೊಂಡು ಬೆಲೆಯನ್ನು ನಿರ್ಧರಿಸಿ ದಲ್ಲಾಳಿಗೆ ಹಾಗೂ ವರ್ತಕರಿಗೆ ಮಾರುಕಟ್ಟೆ ನಿರ್ದೇಶಕರ ಪೂರ್ವಾನುಮತಿಯೊಂದಿಗೆ ಹಂಚಲಾಗಿದೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಸ್ವಾಭಾವಿಕವಾಗಿ ಈ ನಿವೇಶನ ದರ ಮಾರುಕಟ್ಟೆ ದರಗಳಿಗಿಂತ ಕಡಿಮೆಯಾಗಿದೆ. ಇದಕ್ಕೆ ಮಾರುಕಟ್ಟೆ ನಿರ್ದೇಶಕರ ಒಪ್ಪಿಗೆಯಿದೆ. ಈ ನಿಗದಿ ಬೆಲೆಯಿಂದ ಎ.ಪಿ.ಎಂ.ಸಿ.ಗೆ ಲಾಭವೂ ಆಗಿದೆ.

ಈ ನಿವೇಶನವನ್ನು ಖರೀದಿಸಿ ಅಲ್ಲಿ ವ್ಯವಹಾರ ಪ್ರಾರಂಭಿಸಿದ ದಲ್ಲಾಳಿ ಹಾಗೂ ವರ್ತಕರಿಗೆ ಜಿಲ್ಲಾ ನೋಂದಣಿ ಅಧಿಕಾರಿಗಳಿಂದ ನಿವೇಶನದ ಬೆಲೆಯ ಅಜುಬಾಜು ನೋಟಿಸ್ ನೀಡುವುದರ ಮೂಲಕ ಒತ್ತಾಯಿಸುತ್ತಾ ಇದ್ದಾರೆ. ಇದು ಒಂದು ಸ್ಥಳೀಯ ಸಂಸ್ಥೆ. ನನ್ನ ಉದ್ದೇಶ ಸಾಧನೆಗಾಗಿ ವ್ಯವಹಾರ ಪ್ರಾರಂಭಿಸಿದ ವರ್ತಕರಿಗೆ ಒಪ್ಪಂದದಿಂದ ಕೊಟ್ಟ ಸೌಲಭ್ಯಕ್ಕೆ ಕಿರುಕುಳ ಕೊಡದ ಹಾಗೆ ಮಾಡಬೇಕು ಮತ್ತು ಮೂಲಕ ಖರೀದಿ ಪತ್ರಗಳನ್ನು ಕೊಟ್ಟಿಲ್ಲದೇ ಇರುವುದರಿಂದ ಆ ಆಸ್ತಿಯ ಮೇಲೆ ಹಣಕಾಸಿನ ಸೌಲಭ್ಯಗಳನ್ನು ಪಡೆಯುವುದು ಕಷ್ಟವಾಗಿದೆ. ಇದರ ಬಗ್ಗೆ ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಈ ಗಲಾಟೆಯಲ್ಲಿ ನನಗೆ ಏನು ಕೇಳಲಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಗದಗ ಎ.ಪಿ.ಎಂ.ಸಿ. ಯ ನೂತನ ಪ್ರಾಂಗಣಕ್ಕೆ ಹೆಚ್ಚಿನ ಸ್ಟ್ಯಾಂಪ್ ಡ್ಯೂಟಿ ವಸೂಲಿ ಮಾಡದೆ ಸಂಬಂಧಿಸಿದ ಮಾಲೀಕರಿಗೆ ಹಿಂದಿರುಗಿಸುವ ಬಗ್ಗೆ ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಮುದ್ರಾಂಕ ಅಧಿನಿಯಮ, 1957ರ ಕಲಂ-45ಎ ಪರಿವಿಧಿಯ ರೀತ್ಯಾ ಕ್ರಯ, ದಾನ, ಪರಿವರ್ತನೆ, ವಿಭಾಗ, ವ್ಯವಸ್ಥಾಪಕ ಹಾಗೂ ಪಾಲುದಾರಿಕೆ ವಿಸರ್ಜನೆ ದಸ್ತಾವೇಜುಗಳ ನೋಂದಣಿ ಸಮಯದಲ್ಲಿ, ಅವುಗಳಲ್ಲಿ ಒಳಗೊಂಡ ಸ್ಥಿರಾಸ್ತಿಯು ಅಪಮೌಲ್ಯವಾಗಿರುವುದಾಗಿ ನೋಂದಣಿ ಅಧಿಕಾರಿಯು ಅಭಿಪ್ರಾಯಪಟ್ಟ ಸಂದರ್ಭದಲ್ಲಿ, ಆಸ್ತಿಯ ಮಾರುಕಟ್ಟೆ ಮೌಲ್ಯ ನಿರ್ಧರಣೆಗಾಗಿ ಜಿಲ್ಲಾ ನೋಂದಣಾಧಿಕಾರಿಗಳಿಗೆ ಕಲಂ- 45ಎ(1)ರಡಿಯಲ್ಲಿ ಉಲ್ಲೇಖಿಸಬೇಕಾಗುತ್ತದೆ. ಆದಾಗ್ಯೂ, ಕರ್ನಾಟಕ ಮುದ್ರಾಂಕ ಅಧಿನಿಮಯ, 1957ರ ಮುದ್ರಾಂಕ ಶುಲ್ಕವು ಅನುಸೂಚಿಯ ಅನುಚ್ಛೇದ -20(1)ರ ಪರಂತುಕದ ರೀತ್ಯಾ (ಪ್ರಾವಿಸೋ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗೃಹಮಂಡಳಿ, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ಗೃಹ ನಿರ್ಮಾಣ ಸಹಕಾರ ಸಂಘಗಳು ನಿವೇಶನಗಳ ಹಂಚುವಿಕೆ ಬಗ್ಗೆ ಬರೆದುಕೊಡುವ ಹಸ್ತಾಂತರ ಪತ್ರಗಳಲ್ಲಿ ನಮೂದಿಸಿದ ಪ್ರತಿಫಲದ ಮೊಬಲಗಿನ ಮೇಲೆ ಮಾತ್ರ ಮುದ್ರಾಂಕ ಶುಲ್ಕ ಸಹಕರಿಸಲು ಅವಕಾಶ ನೀಡಲಾಗಿದ್ದು, ಇನ್ನಿತರೆ ಯಾವುದೇ ಸಂಘ-ಸಂಸ್ಥೆಗಳಿಗೆ ಈ ಸೌಲಭ್ಯವಿರುವುದಿಲ್ಲವಾದ್ದರಿಂದ, ಅವುಗಳು ಹಂಚುವ ಸಂಬಂಧದಲ್ಲಿ ಬರೆದು ಕೊಡುವ ದಸ್ತಾವೇಜುಗಳಿಗೆ ಮಾರುಕಟ್ಟೆ ಮೌಲ್ಯದ ಮೇಲೆ ಮುದ್ರಾಂಕ ಶುಲ್ಕವನ್ನು ತುಂಬಬೇಕಾಗುತ್ತದೆ.

2. ಪ್ರಸ್ತುತ ಎ.ಪಿ.ಎಂ.ಸಿ.ಯು ಮಾರುಕಟ್ಟೆ ನಿರ್ದೇಶಕರ ಒಪ್ಪಿಗೆಯನುಸಾರ ದಲಾಲರಿಗೆ ಹಾಗೂ ವರ್ತಕರಿಗೆ ಸಂಸ್ಥೆ ನಿರ್ಧರಿಸಿದ ದರಗಳಿಗನುಗುಣವಾಗಿ ನಿವೇಶನಗಳನ್ನು ಹಂಚಿಕೆ ಮಾಡಿರುವುದರ ಸಂಬಂಧದಲ್ಲಿ ಬರೆದುಕೊಟ್ಟಿರುವ ಕ್ರಯಪತ್ರಗಳನ್ನು ಗದಗ್ ಉಪ-ನೋಂದಣಾಧಿಕಾರಿಯು ನೋಂದಾಯಿಸಿದ ನಂತರ, ಆಸ್ತಿಯು ಅಪಮೌಲ್ಯವಾಗಿರುವುದರಿಂದ ಕಲಂ-45-ಎ(1) ರಡಿಯಲ್ಲಿ ಜಿಲ್ಲಾ-ನೋಂದಣಾಧಿಕಾರಿ, ಧಾರವಾಡ, ಇವರಿಗೆ ಆಸ್ತಿಯ ಮಾರುಕಟ್ಟೆ ಮೌಲ್ಯ ನಿರ್ಧರಣೆ ಸಲುವಾಗಿ ಉಲ್ಲೇಖಿಸಿದ್ದರ ಮೇರೆಗೆ, ಧಾರವಾಡ ಜಿಲ್ಲಾ-ನೋಂದಣಾಧಿಕಾರಿಗಳು ಪ್ರಶ್ನಿತ ನಿವೇಶನಗಳ ಮೌಲ್ಯವನ್ನು ಅಜುಬಾಜುನಲ್ಲಿರುವ ಆಸ್ತಿಗಳ ಮೌಲ್ಯಕ್ಕಿಂತ ಕಡಿಮೆಗೊಳಿಸಿರುವುದರಿಂದ ಕಾರಣ, ನೋಟೀಸ್ ನೀಡಿರುವುದು ಹಾಲಿ ಕಾಯ್ದೆಗನುಗುಣವಾಗಿರುತ್ತದೆ.

3. ಎ.ಪಿ.ಎಂ.ಸಿ. ಸಂಸ್ಥೆಯನ್ನು ಕರ್ನಾಟಕ ಮುದ್ರಾಂಕ ಅಧಿನಿಯಮ, 1957ರ ಮುದ್ರಾಂಕ ಶುಲ್ಕದ ಅನುಚ್ಛೇಧ -20(1)ರ ಪರಂತುಕದಲ್ಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಂತೆ ಮತ್ತಿತರೆ ಸಂಸ್ಥೆಗಳ ಜೊತೆ ಸೇರ್ಪಡೆ ಮಾಡುವ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

4. ಜಿಲ್ಲಾ-ನೋಂದಣಾಧಿಕಾರಿಯವರಿಗೆ ಉಲ್ಲೇಖಿಸಿರುವ ಮೂಲಕ ದಸ್ತಾವೇಜುಗಳನ್ನು ಸಂಬಂಧಪಟ್ಟವರು ತಮ್ಮ ವ್ಯವಹಾರಕ್ಕಾಗಿ ಬೇಕಾದಂತಹ ಸಂದರ್ಭದಲ್ಲಿ, ಜಿಲ್ಲಾ-ನೋಂದಣಾಧಿಕಾರಿಯವರ ವಿಚಾರಣೆಗೆ ಬೇಕೆಂದಾಗ ಹಾಜರುಪಡಿಸುವುದಾಗಿ ಒಪ್ಪಿ ಲಿಖಿತವಾಗಿ ಪ್ರಮಾಣ ಪತ್ರ ನೀಡಿದರೆ ಮೂಲ ಪತ್ರ ನೀಡುವಂತೆ ರಾಜ್ಯದ ಎಲ್ಲಾ ಜಿಲ್ಲಾ-ನೋಂದಣಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗುತ್ತದೆ. ಇದರಂತೆ ಪ್ರಸ್ತುತ ಪ್ರಕರಣಗಳಿಗೆ ಸಂಬಂಧಪಟ್ಟವರು ಜಿಲ್ಲಾ-ನೋಂದಣಾಧಿಕಾರಿಯವರಲ್ಲಿ ಲಿಖಿತವಾಗಿ ಕೋರಬಹುದಾಗಿರುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಅನುಚ್ಛೇಧ, 20(1)ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಂತೆ ಮತ್ತಿತರೆ ಸಂಸ್ಥೆಗಳ ಜೊತೆ ಸೇರ್ಪಡೆ ಮಾಡುವ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎನ್ನುವಂಥ ಭರವಸೆಯನ್ನು ಕೊಟ್ಟಿದ್ದಾರೆ. ಬಹಳ ಸಂತೋಷ. ಇದರ ಜೊತೆಗೆ ಇದರ ಬಗ್ಗೆ ತಾವು ನಿರ್ಣಯ ತೆಗೆದುಕೊಳ್ಳವವರೆಗೆ, ಅವರು ರಿಕವರಿ ಪ್ರೋಸೀಡಿಂಗ್ಸ ಏನೂ ಮಾಡಲಾರದ ಹಾಗೆ ಅವರಿಗೆ ಆದೇಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಉಪಾಧ್ಯಕ್ಷರೆ, ನನ್ನ ಸ್ವಂತ ಅಭಿಪ್ರಾಯ ಇದಕ್ಕೆ ವಿರುದ್ಧವಾಗಿದೆ. ಕಾರಣವೇನೆಂದರೆ ಅಲ್ಲಿ ಕಮರ್ಷಿಯಲ್ ಪರಪಸಗೋಸ್ಕರ ಆ ಸೈಟುಗಳನ್ನು ಕೊಡುತ್ತಾ ಇರುವುದು. ಅದಕ್ಕೆ ಮಾರ್ಕೆಟ್ ಬೆಲೆ ಕೊಡಬೇಕಾಗುತ್ತದೆ. ಬಿ.ಡಿ.ಎ.ಗೆ ಆಗಲಿ, ಅಥವಾ ಬೇರೆ ಸಂಸ್ಥೆಗಳಿಗೆ ಏಕೆ ರಿಯಾಯಿತಿ ಕೊಟ್ಟಿದ್ದೇವೆಂದರೆ ಅವರು ಸೈಟುಗಳನ್ನು ವಾಸಕ್ಕೆ ತೆಗೆದುಕೊಂಡಿರುವುದು ಮತ್ತು ಅವರಿಗೆ ಅನುಕೂಲವಾಗಲಿ ಎಂದು ಕೊಟ್ಟಿದ್ದೇವೆ. ಆದರೆ ಇಲ್ಲಿ ವ್ಯಾಪಾರಸ್ಥರಿಗೆ ರಿಯಾಯಿತಿಯನ್ನು ಕೊಡುವುದಕ್ಕೆ ಹೋದರೆ ಸರ್ಕಾರ ನಡೆಸುವುದಾದರೂ ಹೇಗೆ? ಅದು ಕಷ್ಟವಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ಇದರಲ್ಲಿ ವ್ಯಾಪಾರಸ್ಥರಿಗೆ ಮತ್ತು ದಲ್ಲಾಳಿಗಳಿಗೆ ಕೊಟ್ಟಿದ್ದಂಥ ಸೈಟುಗಳು ಉಳಿದ ಕಮರ್ಷಿಯಲ್ ಸೈಟುಗಳಂತೆ ಆಗುವುದಿಲ್ಲ. ಅವರು ಬೇಕಾದವರಿಗೆ ಮಾರುವುದಕ್ಕೆ ಅವಕಾಶವಿಲ್ಲ. ಎ.ಪಿ.ಎಂ.ಸಿ. ಲೈಸೆನ್ಸ ಇದ್ದವರಿಗೆ ಮಾತ್ರ ಮಾರಬೇಕಾಗುತ್ತದೆ. ಈ ಎ.ಪಿ.ಎಂ.ಸಿ.ಯು ನೂತನ ಪ್ರಾಂಗಣಕ್ಕೆ ಸ್ಥಳಾಂತರಿಸುವ ಸಲುವಾಗಿ ಒಂದು ಸೌಲಭ್ಯವನ್ನು ದೊರಕಿಸಿಕೊಡಬೇಕೆಂದು ರಾಜ್ಯದ ಎಲ್ಲಾ ಮಾರುಕಟ್ಟೆಗಳಿಗಿಂತ ಕಡಿಮೆ ರೇಟ್ಸಗೆ ಕೊಟ್ಟಿರುತ್ತಾರೆ. ಅದರ ಸಲುವಾಗಿ ನಾವು ರೈತರಿಂದ ಭೂಮಿಯನ್ನು ಖರೀದಿಸಿರುವಂಥದ್ದು 3 ಸಾವಿರದಿಂದ 9 ಸಾವಿರ, ಇತ್ತೀಚೆಗೆ 4-5 ಸಾವಿರ ಎಕರೆ ಖರೀದಿ ಮಾಡಿದ್ದಾರೆ. ಒಂದು ಸ್ಕೆಯರ್ ಫೂಟಗೆ 50ಪೈಸೆಯಿಂದ ಹಿಡಿದು 13ರೂಪಾಯಿಯವರೆಗೆ ಕೊಟ್ಟಿದ್ದಾರೆ. ಅದೇ ಜಾಗವನ್ನು ನೀವು ಹೊರಗೆ ಕೊಟ್ಟಿದ್ದರೆ, 50 ರೂಪಾಯಿ, 60 ರೂಪಾಯಿ 100 ರೂಪಾಯಿ ಇಂದ 175 ರೂಪಾಯಿ ಒಂದು ಸ್ಕೇರ್ ಫೂಟಗೆ ಇದೆ. ಅದಕ್ಕೂ ಇದಕ್ಕೂ

ಕಂಪೇರ್ ಮಾಡಲಿಕ್ಕೆ ಹೋಗಬೇಡಿ. ಇದರಲ್ಲಿ ಸೌಲಭ್ಯ ಒದಗಿಸಬೇಕು ಎನ್ನುವುದು ಸರ್ಕಾರದ ಉದ್ದೇಶ ಇರಬೇಕು, ಇದರಿಂದ ನಾವು ಸರ್ಕಾರಕ್ಕೆ ಆದಾಯ ಮಾಡಿಕೊಳ್ಳುವಂಥ ಉದ್ದೇಶ ಇರಬಾರದು. ಆದ್ದರಿಂದ ದಯಮಾಡಿ ತಮ್ಮ ಅಭಿಪ್ರಾಯವನ್ನು ಬದಲು ಮಾಡಬೇಕು. ಇದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಅದನ್ನು ಯೋಚನೆ ಮಾಡಲಾಗುವುದು.

ಉಪಾಧ್ಯಕ್ಷರು : ಶ್ರೀ ಶಿವಾನಂದ ಸಿದ್ಧರಾಮಪ್ಪ ಪಾಟೀಲ್ (ಟಿಕೋಟಾ) ಅವರ ಗಮನ ಸೆಳೆಯುವ ಸೂಚನೆಗೆ ನಾಳೆಯ ದಿವಸ ಮಾನ್ಯ ಸಚಿವರು ಹೇಳಿಕೆಯನ್ನು ಕೊಡುತ್ತಾರೆ.

ನಿಯಮ 351ರ ಮೇರೆಗೆ

(1) ಖಾಸಗಿ ಶಾಲೆಗಳಿಗೆ ಶಾಶ್ವತವಾಗಿ ಅನುಧಾನವನ್ನು ಕೊಡುವುದಿಲ್ಲವೆಂದು ಹೇಳಿರುವ ಬಗ್ಗೆ ಅನುಧಾನ ರಹಿತ ಶಾಲೆಯ ಶಿಕ್ಷಕರು, ಮತ್ತು ನೌಕರುಗಳು ಚಳುವಳಿ

ಶ್ರೀ ಕೆ.ಎನ್. ಪುಟ್ಟಣ್ಣಯ್ಯ (ಪಾಂಡವಪುರ) : ಖಾಸಗಿ ಶಾಲೆಗಳಿಗೆ ಶಾಶ್ವತವಾಗಿ ಅನುಧಾನವನ್ನು ಕೊಡುವುದಿಲ್ಲವೆಂದು ಹೇಳಿರುವ ಬಗ್ಗೆ ಅನುಧಾನ ರಹಿತ ಶಾಲೆಯ ಶಿಕ್ಷಕರು ಮತ್ತು ನೌಕರುಗಳು ಚಳುವಳಿಯನ್ನು ನಡೆಸುತ್ತಿರುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

+ ಶ್ರೀ.ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಶಿಕ್ಷಣವನ್ನು ನೀಡುವುದು ಒಂದು ಸಾಮಾಜಿಕ ಕರ್ತವ್ಯ ಇಂತಹ ಸಾಮಾಜಿಕ ಕರ್ತವ್ಯವನ್ನು ಸರ್ಕಾರ ಸದಾ ನಿರ್ವಹಿಸುತ್ತಿದೆ. ಇದಕ್ಕಾಗಿ ಅಗತ್ಯತೆಗೆ ಅನುಗುಣವಾಗಿ ರಾಜ್ಯದಲ್ಲಿ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದೆ. ಸರ್ಕಾರವು ಎಲ್ಲಾ ಮೂಲಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಾಕಷ್ಟು ಆಯವ್ಯಯದಲ್ಲಿ ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಿದೆ. ಸರ್ಕಾರ ಇಷ್ಟು ಹಣವನ್ನು ಖರ್ಚು ಮಾಡುತ್ತಿದ್ದರೂ ಶಿಕ್ಷಣವನ್ನು ಎಲ್ಲಾರಿಗೂ ನೀಡಲು ಸಾಧ್ಯವಾಗುತ್ತಿಲ್ಲ. ಇಂತಹ ಸಮಯದಲ್ಲಿ ಸಾರ್ವಜನಿಕರ ಸಹಕಾರ ತುಂಬಾ ಅಗತ್ಯ. ಅನೇಕ ಸಂಘ ಸಂಸ್ಥೆಗಳು ಶಾಲೆಗಳನ್ನು ಪ್ರಾರಂಭಿಸಲು ಮುಂದೆ ಬರುತ್ತಿದ್ದು, ಶಾಲೆಗಳನ್ನು ತೆರೆಯಲು ಅನುಮತಿಯನ್ನು ನೀಡಲಾಗುತ್ತಿತ್ತು. ಹಾಗೂ ಧಾರಾಳವಾಗಿ ಅನುದಾನಗಳನ್ನು ಈರೀತಿಯ ಶಾಲೆಗಳಿಗೆ ಈಗ ಅನುದಾನವನ್ನು ನೀಡಲು ಸಾಧ್ಯವಾಗುತ್ತಿಲ್ಲ. ಅನೇಕ ಸಂಘ ಸಂಸ್ಥೆಗಳು ತನ್ನ ಸಂಪನ್ಮೂಲಗಳಿಂದಲೇ ಶಾಲೆಗಳನ್ನು ನಡೆಸುವುದಾಗಿ ಒಪ್ಪಿ ಶಾಶ್ವತ ಅನುದಾನ ರಹಿತವಾಗಿ ಶಾಲೆಗಳನ್ನು ತೆರೆಯಲು ಮನವಿಗಳನ್ನು ಸಲ್ಲಿಸಿರುವುದನ್ನು ಸರ್ಕಾರವು ಪರಿಶೀಲಿಸಿ ಶಾಶ್ವತ ಅನುದಾನ ರಹಿತ ಆಧಾರದ ಮೇಲೆ ಶಾಲೆಗಳನ್ನು ತೆರೆಯಲು ಪರವಾನಗಿಯನ್ನು ನೀಡಲಾಗುತ್ತಿದೆ. ಇದುವರೆವಿಗೂ ಸುಮಾರು 2,494 ಶಾಶ್ವತ ಅನುದಾನ ರಹಿತ ಪ್ರೌಢಶಾಲೆಗಳನ್ನು ಮತ್ತು 1,813ಶಾಶ್ವತ ಅನುದಾನ ರಹಿತ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಸರ್ಕಾರ ಅನುಮತಿಯನ್ನು ನೀಡಲಾಗಿದೆ. ಈ ಶಾಲೆಗಳನ್ನು ತೆರೆಯಲು ಶಾಶ್ವತ ಅನುದಾನ ರಹಿತ ಆಧಾರದ ಮೇಲೆ ಮಂಜೂರು